'ಚಾರೂ, ನಿನಗೆ ಗೊತ್ತೇನು? ನಿರ್ಮಲಾಳಿಗೆ ಮಲ್ಲಿಗೆ ತುಂಬಾ ಇಷ್ಟವಿತ್ತು. ಅವಳಿಂದ ನನಗೂ ಮಲ್ಲಿಗೆ ಇಷ್ಟವಾಗತೊಡಗಿತು.'

ನಿರ್ಮಲಾ ಅದನ್ನು ಕೂದಲಲ್ಲಿ ಮುಡಿದುಕೊಳ್ಳುವುದು ಮತ್ತು ತಾನು ಅವಳ ಕೂದಲಿನ ವಾಸನೆಯನ್ನು ಹೀರುವುದು... ಆಗ ಆ ಸುಗಂಧ ಇನ್ನೂ ಹೆಚ್ಚು ಮನಸೆಳೆಯುತ್ತಿತ್ತು. ಸುಖದ ದಿನಗಳ ನೆನಪು ಅವರ ತುಟಿಯಲ್ಲಿ ನಗುವನ್ನು ಅರಳಿಸಿತು.

ಈ ದಿನ ಮೊದಲ ಬಾರಿ ಚಾರು ಅಲ್ಲಿ ಕಳೆದು ಹೋದವಳಂತೆ ಕುಳಿತಿದ್ದಾಳೆ. ಅವಳನ್ನು ನೋಡಿದಾಗ ಅವರಿಗೆ ಅನಿಸಿತು – ತಾನು, ಆ ಮೂಲೆಯಲ್ಲಿರುವ ಹುಚ್ಚ ಮತ್ತು ಈ ಚಾರು ಮೂರೂ ಮಂದಿ ಒಂದೇ ದಾರಿಯಲ್ಲಿ ಸಾಗುತ್ತಿದ್ದೇವೆ... ಏಕಾಂಗಿತನದ ದಾರಿ. ಹಾಗಿದ್ದರೂ ನಮ್ಮ ದಾರಿ ಮಾತ್ರ ಭಿನ್ನವಾದುದು... ನಮ್ಮ ಏಕಾಂಗಿತನವೂ ಭಿನ್ನವಾದುದು. ಗತಿ ಗೋತ್ರದವರು ಎಲ್ಲಾ ಇದ್ದೂ ಆ ಹುಚ್ಚ ಏಕಾಂಗಿ; ಎಲ್ಲರ ನಡುವೆ ಇದ್ದೂ ಏಕಾಂಗಿ. ಆದರೆ ಅವನಿಗೆ ಅದರ ತಿಳಿವಳಿಕೆ ಇಲ್ಲ. ಅವನ ಏಕಾಂಗಿತನ ಜಡವಾಗಿಸುವಂತಹದು. ಮೊಂಡು, ಹರಿತವಿಲ್ಲದ್ದು.

ಈ ಚಾರು! ಇವಳು ಸಾಂಗತ್ಯವನ್ನು ಎಲ್ಲಿ ಅನುಭವಿಸಿದ್ದಾಳೆ? ಹಿಂದೆ ಮುಂದೆ ಈ ಏಕಾಂಗಿತನ ಅಸಹ್ಯವೆನಿಸಿದರೂ, ಇವಳ ಪಾಲಿಗೆ ಹಿಂದಿನ ಸಿಹಿ ನೆನಪಿನ ಆಧಾರ ಕೂಡ ಇಲ್ಲ. ಪ್ರತಿಯೊಂದು ಪ್ರಶ್ನೆಗೆ ಉತ್ತರ ಹುಡುಕುತ್ತಾಳೆ. ಏಕಾಂಗಿತನ ಇದು ಮನಷ್ಯನ ಬದುಕಿನ ಸತ್ಯವೇ ಎಂದು ಮತ್ತೆ ಮತ್ತೆ ಸಮಾಧಾನಪಡಿಸುವ ಪ್ರಯತ್ನ ನಡೆಸುತ್ತಾಳೆ, ಹುಚ್ಚಿ!

'ಇದು ಹೀಗೆ ಇವತ್ಯಾಕೆ ಆಗುತ್ತಿದೆ ಸರ್?' ಚಾರುವಿನ ಹೃದಯದೊಳಗಿನ ಗಾಢಂಧಕಾರದ ಬಿರುಗಾಳಿ ಉತ್ತರ ಹುಡುಕುತ್ತಿದೆ.

'ಚಾರೂ, ಪ್ರತಿಯೊಂದು ಪ್ರಶ್ನೆಗೆ ಉತ್ತರ ನೀಡಲಾಗದು. ಕೆಲವು ವಿಚಾರಗಳು ಬರೀ ಅನುಭವವನ್ನು ಆಧರಿಸಿಯೇ ಇರುತ್ತವೆ. ಅದೇ ರೀತಿ ಈ ಬಿರುಗಾಳಿ ನಿನ್ನ ಅನುಭವ. ಈ ಅನುಭವದಿಂದ ಪ್ರಾಯಶಃ ನಿನಗೆ ಉತ್ತರ ಸಿಗಬಹುದು... ಅಥವಾ ಸಿಗದೇ ಇರಬಹುದು.'

ಚಾರುವಿನ ಅಂತರಂಗದ ಭಾವೋದ್ರೇಕ ಅಸಹನೀಯವಾಯಿತು. ಸಮುದ್ರದ ಅಲೆಗಳು ಭರತದ ಸಮಯದಲ್ಲಿ ಬಿರುಸಾಗಿ ಬಂದು ದಡದಲ್ಲಿ ಸಿಡಿದು ಹೋಗುವ ಹಾಗೆ ಹೃದಯದ ಭಾವೋದ್ರೇಕ ಕಣ್ಣಿನಂಚಿನಲ್ಲಿ ಸಿಡಿಯುತ್ತಿತ್ತು ಮತ್ತೆ ಹಿಂತಿರುಗಿ ಹೋಗುತ್ತಿತ್ತು. ಮತ್ತೆ ಸಿಡಿಯುತ್ತಿತ್ತು. ಹೀಗೆ ಎಷ್ಟೋ ಸಮಯದವರೆಗೆ ನಡೆಯಿತು. ಆಮೇಲೆ ವೇಳೆ ಕಳೆಯುತ್ತಿದ್ದಂತೆ ಚಾರುವಿನ ಹೃದಯದೊಳಗಿನ ಬಿರುಗಾಳಿ ದೂರ ದೂರ ಸರಿಯಲಾರಂಭಿಸಿತು. ಅವಳ ಜೀವಕ್ಕೆ ಹಗುರವೆನಿಸಿತು. ಸ್ತಿಮಿತಕ್ಕೆ ಬಂದ ಚಿತ್ತದಿಂದ ಅವಳು ಮತ್ತೆ ತನ್ನ ಮನಸ್ಸನ್ನು ಶೋಧಿಸಲಾರಂಭಿಸಿದಳು. ತನ್ನ ಸುಪ್ತ ಮನ ಮೊದಲಿನಿಂದಲೂ ಯಾರದ್ದಾದರೂ ಸಾಂಗತ್ಯವನ್ನು ಹುಡುಕುತ್ತಿತ್ತೇ?

ಇರಬಹುದು.

ತಿಳಿದೋ ತಿಳಿಯದೆಯೋ ತಾನು ಉದ್ದೇಶಪೂರ್ವಕವಾಗಿ ಮನಸ್ಸಿನ ಹರಿವಿಗೆ ತಡೆಯೊಡ್ಡುವ ಪ್ರಯತ್ನವನ್ನು ನಡೆಸುತ್ತಾ ಬಂದಿರುವೆನೇ?

ಇರಬಹುದು.

ತನ್ನ ಹೃದಯದ ತಳಮಳ, ಅಸಹನೆ ಇವು ಈ ಏಕಾಂಗಿತನದ ಒಂದು ಭಾಗವಾಗಿರಬಹುದೇ?